(5) ಹಾಸನ ಜಿಲ್ಲಾ ಪರಿಷತ್ತಿಗೆ ಸಂಬಂಧಿಸಿದ ಸಿಮೆಂಟ್ ಚೀಲಗಳನ್ನು ಖಾಸಗೀಯವರಿಗೆ ಕೊಟ್ಟಿರುವುದು.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಹಾಸನ ಜಿಲ್ಲಾ ಪರಿಷತ್ತಿನಲ್ಲಿ, ಅರಕಲಗೂಡು ತಾಲ್ಲೂಕಿನ ಜಿಲ್ಲಾ ಪರಿಷತ್ತಿನ ಕೆಲಸಗಳ ಬಾಬ್ತು (ಡಿಪಾರ್ಟ್‌ಮೆಂಟಿಲ್ ವರ್ಕ್ಸ್) ನಾಲ್ಕು ನೂರು ಸಿಮೆಂಟ್ ಮೂಟೆಗಳನ್ನು ಖಾಸಗಿ ವ್ಯಕ್ತಿಯೊಬ್ಬರಿಗೆ ಕೊಟ್ಟಿದ್ದು ಖಾಸಗಿ ವಾಹನದಲ್ಲಿಯೇ ಸಾಗಣೆ ಮಾಡಿಕೊಂಡು ಸಿಮೆಂಟ್ ದುರುಪಯೋಗವಾಗಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಹೇಳಿಕೆ ನೀಡಬೇಕೆಂದು ಒತ್ತಾಯಪಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಎತ್ತಿದಂಥ ಪ್ರಶ್ನೆಗಳನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಹಾಗೂ ಪಶುಸಂಗೋಪನಾ ಮಂತ್ರಿಗಳ ಗಮನಕ್ಕೆ ತಂದು ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದು.

(6) ಬಂಟ್ವಾಳ ತಾಲ್ಲೂಕಿನ ಬಡಗ ಬೆಳ್ಳೂರು ಗ್ರಾಮದಲ್ಲಿ ಕಾರ್ಮಾರ್‌ಗುಂಡಿ ಏತನೀರಾವರಿ ಯೋಜನೆ

ಶ್ರೀ ಎಂ. ರುಕ್ಮಯ್ಯ ಪೂಜಾರಿ (ವಿಟ್ಲ) : ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬಡಗ ಬೆಳ್ಳೂರು ಗ್ರಾಮದಲ್ಲಿ 'ಕರ್ಮಾರ್‌ಗುಂಡಿ' ಎತ್ತು ನೀರಾವರಿ ಯೋಜನೆ ಮಂಜೂರಾದಾಗ ಬಡಗ ಬೆಳ್ಳೂರು ಜನತೆ ಅದರಲ್ಲಿಯೂ ಮುಖ್ಯವಾಗಿ ಆ ಯೋಜನೆಯ ಪ್ರಯೋಜನ ಪಡೆಯತಕ್ಕ ರೈತರು ತುಂಬಾ ಸಂತೋಷ ಪಟ್ಟಿದ್ದರು. ಸುಮಾರು ಅರೆವಾಸಿ ಕೆಲಸ ಆಗಿ ಈಗ ಸುಮಾರು ಎರಡು ವರ್ಷಗಳಿಂದ ಅದರ ಕಾಮಗಾರಿ ಕೆಲಸ ಪೂರ್ತಿ ನಿಂತುಹೋಗಿದೆ. ಇದರಿಂದ ಆ ಊರಿನ ರೈತರು ತುಂಬಾ ನೊಂದಿದ್ದಾರೆ. ಒಂದು ಕಡೆಯಿಂದ ಸರ್ಕಾರ ಕೆಲವು ಲಕ್ಷ ರೂಪಾಯಿ ಖರ್ಚು ಮಾಡಿ ಕೆಲಸ ಅರ್ಧದಲ್ಲಿ ನಿಂತಿರುವುದು, ಮತ್ತೊಂದು ಕಡೆ ರೈತರು ತಮ್ಮ ಕೃಷಿಗೆ ಈ ಯೋಜನೆಯಿಂದ ನೀರಿನ ಅನುಕೂಲವಾಗಬಹುದೆಂದು ನಿರೀಕ್ಷೆಯಲ್ಲಿರುವುದು ನೋಡಿದಾಗ ಸರಕಾರಕ್ಕೆ ರೈತರ ಬಗ್ಗೆ ಕಳಕಳಿ ಇಲ್ಲವೇ ಅಥವಾ ರೈತರಿಗೆ ನಿರಾಶೆ ಉಂಟು ಮಾಡಲು ಈ ರೀತಿ ಆಗಿರುವುದೇ ಎಂದು ಭಾವಿಸಬೇಕಾಗಿದೆ.

ಆದ್ದರಿಂದ ಸರಕಾರ ರೈತರ ಹಿತದೃಷ್ಟಿಯಿಂದ ಈ ಬಗ್ಗೆ ತುರ್ತು ಗಮನ ಹರಿಸಿ ಕಾಮಾಗಾರಿ ಕೆಲಸ ಅರ್ಧ ಆಗಿ ನಿಂತುಹೋಗಿರುವುದನ್ನು ಪುನಃ ಪ್ರಾರಂಭಿಸಿ ಯೋಜನೆ ಸಂಪೂರ್ಣಗೊಳಿಸುವುದರ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕಾಗಿ ಸರಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ, ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ; ನಾನು ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬಡಗ ಬೆಳ್ಳೂರು ಗ್ರಾಮದಲ್ಲಿ "ಕರ್ಮಾರ್‌ಗುಂಡಿ" ಎತ್ತು ನೀರಾವರಿ ಯೋಜನೆಯ ಅಂದಾಜು ಮೊತ್ತ 19.65 ಲಕ್ಷ ರೂಪಾಯಿದ್ದು ಆಗಿದ್ದು 123.89 ಹೆಕ್ಟೇರ್ ಅಷ್ಟು ಅಚ್ಚುಕಟ್ಟು ಒಳಗೊಂಡಿರುತ್ತದೆ. ಸದರಿ ಯೋಜನೆಯ ಹೆಡ್‌ವಾವ್, ಇನ್‌ಟೇಕ್ ಪ್ರೋಗ್ರಾಮ್ಸ್, ಜಾಕಲ್ ಮತ್ತು ರೈಸಿಂಗ್ ಮ್ಯಾನ್ ಸಿಸ್ಟಮ್‌ಗಳ ಕೆಲಸಗಳಿಗೆ ಮಾತ್ರ ಟೆಂಡರ್ ಮೂಲಕ ಗುತ್ತಿಗೆದಾರರನ್ನು ನೇಮಿಸಲಾಯಿತು. ಕೆಲಸ ಪ್ರಗತಿಯಲ್ಲಿ ಇದೆ. ಮೇಲ್ಕಂಡ ಕಾಮಗಾರಿಗಳಿಗೆ ಅಂದಾಜು 2.87 ಲಕ್ಷ ರೂಪಾಯಿಗಳು ಇದ್ದು ಅಲ್ಲಿಯವರೆಗೆ 0.54 ಲಕ್ಷ ರೂಪಾಯಿಗಳು ವೆಚ್ಚವಾಗಿರುತ್ತದೆ. ಈ ಕಾಮಗಾರಿ ಕೆಲಸ ಪ್ರಗತಿಯಲ್ಲಿದ್ದು 1991-92ನೇ ಸಾಲಿನಲ್ಲಿ ಪೂರ್ಣಗೊಳ್ಳುತ್ತದೆಂದು ಉದ್ದೇಶಿಸಲಾಗಿದೆ.